ಶ್ರೀ ಕಡಿದಾಳ್ ಮಂಜಪ್ಪ.—ಒಂದು ತತ್ಪದಮೇಲೆ ಜಮೀನು ಕೊಟ್ಟಿದೆ. ಹಿಂದೆ ಅವರ ಪರವಾಗಿ ರೆಕಾರ್ಡ್ ಬಿರ್ಡ್‌ಅಪ್ ಆಗಿತ್ತು. ಆದರೆ ಆ ಜಮೀನು ರಿಲೀಸ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ದರ ಖಾಸ್ತು ವಜಾ ಮಾಡಿದ್ದರು. ಪುನಃ ಅವನ ಅರ್ಜಿಯನ್ನು ಪರಿಗಣಿಸದೆ ಹರಾಜು ಮಾಡಿದ್ದರಿಂದ ಎರಡು ಎಕರೆ ಆದರೂ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ.

ಶ್ರೀ ಟಿ. ಹನುಮಯ್ಯ.—ದರಖಾನ್ತು ಅರ್ಜಿ ತಿರಸ್ಕಾರ ಮಾಡಿರುವ ಡೆಪ್ಯುಟಿಕಮೀಷನರು, ಈ ಜಮೀನು ಆತನಿಗೆ ಸಿಕ್ಕಕೂಡದು ಎಂಬ ಉದ್ದೇಶದಿಂದ ಮಾಡಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಈ ರೆಕಾರ್ಡ್‌ನಲ್ಲಿ ವ್ಯಕ್ತವಾಗಿಲ್ಲ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಯಾವ ಆಧಾರದಮೇಲೆ ಇದನ್ನು ಹರಾಜು ಮಾಡಲಕ್ಕೆ ಕಾರ್ಯಕ್ರಮ ತೆಗೆದುಕೊಂಡಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದನೆಯದು ಜಮೀನು ರಿಲೀಸ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಈ ಅಪೀಲುದಾರನ ಅರ್ಜಿ ವಜಾಮಾಡಿದ್ದರು. ಕೆಲವುದಿನಗಳ ನಂತರ ರಿಲೀಸ್ ಮಾಡಬಹುದು ಎಂದು ಹೇಳಿ ಅಭಿಪ್ರಾಯಪಟ್ಟರು. ಆ ಅಭಿಪ್ರಾಯದ ಪ್ರಕಾರ ಹರಾಜು ಆಯಿತು.

ಶ್ರೀ ಟಿ. ಹನುಮಯ್ಯ.—ಪ್ರತಿವಾದಿಯು ಜೀವನೋಪಾಯಕ್ಕೆ ಯಾವ ಮಾರ್ಗವೂ ಇಲ್ಲದಿರುವ ಒಬ್ಬ ಬಡ ಆದಿಕರ್ನಾಟಕ ಎಂದು ಹೇಳಿದ್ದಾರೆ. ಹಾಗಾದರೆ ಈ ಎರಡು ಎಕರೆ ಮಂಜೂರು ಮಾಡಿದ್ದೀರಲ್ಲಾ ಇವರು ಕೋಟ್ಯಾಧೀಶ್ವರರೋ ?

ಶ್ರೀ ಕಡಿದಾಳ್ ಮಂಜಪ್ಪ.—ಬಡ ಆದಿಕರ್ನಾಟಕರು ಎಂದು ಹೇಳಿರುವುದು ನ್ಯಾಯವಾದ ಕಾರಣವಲ್ಲ.

ಶ್ರೀ ಟಿ. ಹನುಮಯ್ಯ.—ಅಷ್ಟೇಅಲ್ಲದೆ ಅವರ ಹಿಂದೆ ಪ್ರಭಾವಶಾಲಿಗಳು ಇದ್ದಾರೆ ಎಂದು ಹೇಳಿದ್ದಾರೆ. ಯಾರು, ನ್ಯಾಯವಿ, ಆ ಪ್ರಭಾವಶಾಲಿಗಳು, ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿಲ್ಲ. ವಾಸ್ತವಿಕವಾಗಿರತಕ್ಕ ರೆಕಾರ್ಡ್‌ಮೇಲೆಯೇ ಕೇಸು ತೀರ್ಮಾನ ಆಗುವುದು.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅಪೀಲುದಾರ ಏನು ಸ್ಟೇಟ್‌ಮೆಂಟ್ ಕೊಡುತ್ತಾನೆಯೋ ಅದೇ ನಿಜ ಎಂದು ಸರ್ಕಾರದವರು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವನು ಹೇಳಿದ್ದೆಲ್ಲಾ ವೇದವಾಕ್ಯ ಅಲ್ಲ. ರೆಕಾರ್ಡ್‌ನಲ್ಲಿರುವುದರಮೇಲೆ ಹೋಗುತ್ತದೆ.

Muzrai Institutions. (Representation of Harijans in Committees of Dharmadarsis).

Q.—208. **Sri M. CHIKKALINGIAH** (Malavalli—Scheduled Castes).—

Will the Government be pleased to state :—

(*a*) whether it is not a fact that constant representations have been made regarding the selection of Dharmadarsis to the Managing Committees of Major and Minor Muzrai Institutions in the State ;

(*b*) the action taken by the authorities in this direction ;

(*c*) whether it has come to their notice that in some cases where Dharmadarsis are not taken to Committees, they are not properly invited to the meetings ?

A.—**Sri Kadidal MANJAPPA** (Minister for Revenue and Public Works).—

(*a*) The question is vague and too general.

(*b*) and (*c*) Do not arise in view of answer to (*a*).

ಶ್ರೀ ಎಂ. ಚಿಕ್ಕಲಿಂಗಯ್ಯ.—ಮೇಜರ್ ಮತ್ತು ಮೈನರ್ ಮುಜರಾಯ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಮ್ಯಾನೇಜಿಂಗ್ ಕಮಿಟಿಗಳು ಇವೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಕಮಿಟಿಗಳಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರನ್ನು ನೇಮಕ ಮಾಡಿಕೊಳ್ಳಬೇಕು ಅಥವಾ ಸೇರಿಸಿಕೊಳ್ಳಬೇಕು ಎಂದು ಹೇಳಿಕೊಳ್ಳುತ್ತಾ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.— ಅವರನ್ನೂ ನಹ, ನರಿಯಾದ ಅರ್ಹತೆ ಇದ್ದವರು ಇದ್ದರೆ ಸೇರಿಸಬೇಕು ಎಂದುಹೇಳಿ ನರ್ಕ್ಯುಲರ್ ಕಳುಹಿಸಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಹೇಳಿದ್ದು ನರಿಯಾಗಿ ಅರ್ಥವಾಗಲಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತಮಗೆ ಆ ನರ್ಕ್ಯುಲರ್‌ನ್ನೇ ಓದಿಹೇಳುತ್ತೇನೆ :—

> "Government agree that this is desirable and the Muzrai Commissioner is accordingly requested to issue suitable instructions to the Deputy Commissioners of Districts to appoint one or two Harijans whom they consider suitable at the next reconstitution of the committees of Dharmadarsis to the Muzrai Temples."

ಶ್ರೀ ಎಂ. ಚಿಕ್ಕಲಿಂಗಯ್ಯ.— ಇವುಗಳು ರೀಕಾನ್ಸ್ಟಿಟ್ಯೂಟ್ ಆಗಬೇಕಾದರೆ 3-4 ವರ್ಷಕ್ಕೆ ಒಂದುಸಾರಿ ಆಗುತ್ತವೆ. ರೀಕಾನ್ಸ್ಟಿಟ್ಯೂಟ್ ಆಗುವಾಗ ಸೇರಿಸಿಕೊಳ್ಳಬೇಕು ಎಂಬುದಲ್ಲ. ಈಗ ಹಾಲಿ ಇರತಕ್ಕ ಲಿಸ್ಟ್‌ನಲ್ಲೇ additional ಆಗಿ ನಮ್ಮವರನ್ನು ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹರಿಜನರನ್ನು ಈ ಧರ್ಮದರ್ಶಿಗಳ ಪಟ್ಟಿಯಲ್ಲಿ ಸೇರಿಸುವ ದೆಶೆಯಿಂದ ಅಸ್ಪೃಶ್ಯತಾನಿವಾರಣೆಗೆ ಸಹಾಯವಾಗುತ್ತದೆಯಲ್ಲವೆ ?

Sri Kadidal MANJAPPA.—I agree with the Hon'ble Member.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದಷ್ಟು ಜಾಗ್ರತೆ definite ಆಗಿ, ಅಡಿಷನಲ್ ಮೆಂಬರುಗಳನ್ನು ತೆಗೆದುಕೊಳ್ಳಬೇಕೆಂದು ಇಕ್ಸ್‌ಪ್ರೆಷ್ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

Anicut across Kushavati River, Chintamani Taluk.

Q.—473. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) when the estimate for Rs. 4,000 was prepared for repairing the anicut across the Kushavati River near Yesagalahalli in Chintamani Taluk ;

(*b*) the reason for not taking up the work so far ;

(*c*) whether it is not a fact that it has an atchkat of 105 acres ;

(*d*) the time required for repairing the said anicut ?

A.—Sri Kadidal MANJAPPA (Minister for Revenue and Public Works).—

(*a*) In January 1954. It is for Rs. 40,000 and not Rs. 4,000.

(*b*) The estimate is not yet sanctioned.

(*c*) Yes.

(*d*) About a year to complete the work after the estimate is sanctioned.

ಶ್ರೀ ಜೆ. ನಾರಾಯಣಪ್ಪ.—ಈ ಅಣೆಕಟ್ಟೆ ಒಡೆದು ಹೋಗಿ ಎಷ್ಟು ವರ್ಷವಾಯಿತೆಂದು ಹೇಳುವುದಕ್ಕೆ ಸಾಧ್ಯವೆ ?

*ಶ್ರೀ ಕಡಿದಾಳ್ ಮಂಜಪ್ಪ. ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಈ 105 ಎಕರೆ ಅಚ್ಚುಕಟ್ಟಿಗೆ ತರಿ ಕಂದಾಯ ಕೊಡುತ್ತಾರೋ ಅಥವಾ ಖುಷ್ಕಿ ಕಂದಾಯ ಕೊಡುತ್ತಾರೋ ?

*ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ಈಗ ನನ್ನಲ್ಲಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಈ ಅಚ್ಚುಕಟ್ಟಿನಲ್ಲಿ ಖುಷ್ಕಿ ಫಸಲಟ್ಟರೆ ಜಾಗುನೀರಿನಿಂದ ಆಗುವುದಿಲ್ಲ. ತರಿ ಫಸಲಟ್ಟರೆ ನೀರು ಸಾಲದೆ ಒಣಗಿ ಹೋಗುವುದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಜೆ. ನಾರಾಯಣಪ್ಪ.—ಈಗ ನಾನು ಗಮನಕ್ಕೆ ತರುತ್ತಿದ್ದೇನೆ. ಪರಿಸ್ಥಿತಿ ಹೀಗಿರುವುದರಿಂದ ಈಗ ತರಿ ಕಂದಾಯ ಮಾಫಿ ಮಾಡುತ್ತೀರೋ ಅಥವಾ ಖುಷ್ಕಿ ಕಂದಾಯ ಹಾಕುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಅಚ್ಚುಕಟ್ಟಿನಲ್ಲಿ ತರಿಬೆಳೆಯಾಗದಿದ್ದರೆ ತಮ್ಮ ನಲಹೆಯನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಶ್ರೀ ಜಿ. ಪಾಪಣ್ಣ.—ಈ ಅಣೆಕಟ್ಟು ಒಡೆದು ಹೋಗಿರುವಾಗ ಕಂದಾಯ ತರಿ ದರದಲ್ಲಿ ಹೇಗೆ ಹಾಕುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಒಡೆದುಹೋದರೂ ಸ್ವಲ್ಪ ಭಾಗ ನೀರಿರುತ್ತದೆ, ಅದರಿಂದ ತರಿ ವ್ಯವಸಾಯ ಮಾಡುತ್ತಾರೆ.

ಶ್ರೀ ಜೆ. ನಾರಾಯಣಪ್ಪ.—ನಿಜ, ಆದರೆ ಬೆಳೆಯುಟ್ಟ ಮೇಲೆ ಕೆಲವು ದಿವಸಗಳ ಮೇಲೆ ನೀರು ಸಾಲದೆ ಒಣಗಿ ಹೋಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಾಜೆಕ್ಟ್ ನಾನು ನೋಡಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಈ ಅಣೆಕಟ್ಟನ್ನು ಜಾಗ್ರತೆ ರಿಪೇರಿ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ಚೆಕ್ಕಿಕಲ್ ಡೀಟೈಲ್ಸ್ ನನ್ನ ಹತ್ತಿರ ಇಲ್ಲ. ಆದ್ದರಿಂದ ಈ ಪ್ರಾಜೆಕ್ಟನ್ನು ತೆಗೆದುಕೊಳ್ಳಲು ಸಾಧ್ಯವೆ ಅಥವಾ ಇಲ್ಲವೆ ಎಂಬುದನ್ನು ನಿರ್ಧರವಾಗಿ ಹೇಳಲು ಸಾಧ್ಯವಿಲ್ಲ.

Minor Irrigation Works in Bangalore District.

Q.—491. Sri A. V. NARASIMHA REDDY (Bangalore South).—

Will the Government be pleased to state :—

(*a*) the amount spent out of the amount provided for minor irrigation works in Bangalore District ;

(*b*) the number of works undertaken during the year 1954 and the number completed up to 15th September 1954 and the works still remaining to be completed ?

A.—Sri Kadidal MANJAPPA (Minister for Revenue and Public Works).—

(*a*) Rs. 1,80,818.

(*b*) 164 ; 43 and 121.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ಜಿಲ್ಲೆ ಮೈನರ್ ನೀರಾವರಿ ಕಾಂಗಾರಿಗಳಿಗೆ ಎಷ್ಟು ಹಣ ಈಸಾರಿ ಒದಗಿಸಿದ್ದೀರಿ ?

*ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಎಷ್ಟು ಕೊಟ್ಟಿದ್ದಾರೆಂಬುದು ಗೊತ್ತಿಲ್ಲ. ಚೀಫ್ ಇಂಜನಿಯರನ್ನು ಕೇಳಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ 43 ಕಾಂಗಾರಿಗಳು ಮುಗಿದಿವೆಯೆಂದು ಹೇಳಿದೆ. ಇನ್ನೂ ಉಳಿದಿರುವ 121 ಕಾಂಗಾರಿಗಳನ್ನು ಮುಗಿಸಲು ಸಾಕಾದಷ್ಟು ಹಣವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಾದಷ್ಟು ಹಣವನ್ನು ಒದಗಿಸುತ್ತೇವೆ.